ಕಾರಣವಾಗಿರುವ ಸಂದರ್ಭದಲ್ಲಿ ಆತನ ಪೂರ್ವಾಶ್ರಮದ ಬಗ್ಗೆ ಒಂದಿಷ್ಟು ವಿವರಗಳನ್ನು ತಿಳಿಸದೇ ಹೋದಲ್ಲಿ ಕಥೆಗಾರನಾಗಿ ನನ್ನ ಬಾಧ್ಯತೆ ಅಪೂರ್ಣವಾಗುವುದೆಂದೇ ನನ್ನ ಬಲವಾದ ಅನ್ನಿಸಿಕೆ. ಜೊತೆಗೆ, ಆತನ ಪೂರ್ವಾಶ್ರಮದ ಬಗ್ಗೆ ನಾನು ಹೇಳುವುದರಿಂದ ಅವನು ಸಿಲುಕಿರುವ ಕಷ್ಟ ಕೂಪದಿಂದ ಪಾರು ಮಾಡಲು ದೇವೇಗೌಡ, ಕಾಣಿಕ್ಯರಾಜು, ಅಡಿಷನಲ್ ಕಮಿಷನರ್ ಮತ್ತು ಕಮಿಷನರ್ ಮುಂತಾದವರಿಗೆ ಅನುಕೂಲವಾದರೆ ಇಂಥ ಕಥೆಯೊಂದರ ಕಥೆಗಾರನಾಗಿ ಒಂದಿಷ್ಟು ಸಾರ್ಥಕತೆ ಲಭ್ಯವಾದರೂ ನನಗದೊಂದು ದೊಡ್ಡ ಪ್ರಶಸ್ತಿಯೇ ಸರಿ. ಮುಂದೆ ಓದುವಂತರಾಗಿ ಸಹೃದಯರೆ.

ಪೆಂಚಾಲಯ್ಯನಿಗೆ ತನ್ನ ಡೇಟ್ ಆಫ್ ಬರ್ತ್ ಮಿಸ್ಟರಿ ತಿಳಿದಿದ್ದೇ ಎಸ್ಸೆಸ್ಸೆಲ್ಸಿ ಪಾಸಾಗಿ ಪಿಯುಸಿ ಸೇರಲೆಂದು ಕಾಲೇಜಿನ ಮೆಟ್ಟಿಲು ಹತ್ತಿದಾಗ. ಪೆಂಚಾಲಯ್ಯ ಹಳ್ಳಿಗಾಡಿನ ಬಡ ಅನಕ್ಷರಸ್ಥ ಕುಟುಂಬದಲ್ಲಿ ಹುಟ್ಟಿದ್ದರೂ ಪ್ರೈಮರಿ ಸ್ಕೂಲಿನಿಂದಲೇ ಅವನ ತಲೆಯಲ್ಲಿ ಅಕ್ಷರಗಳು ಪತರಗುಟ್ಟತೊಡಗಿದವು. ಅವನ ಅಪ್ಪ ದೊಡ್ಡವನಾದ ಮೇಲೆ ಅವನಿಗೆ ಒಂದಿಪ್ಪತ್ತು ಕುರಿಗಳನ್ನು ತಂದು, ಮನೆ ಮುಂದೆ ಒಂದು ಸಣ್ಣ ಕುರಿರೊಪ್ಪ ಕಟ್ಟಿ ಕುರಿ ಕಾಯಲು ಹಾಕಬೇಕೆಂದು ತೀರ್ಮಾನಿಸಿದ್ದ. ಆದರೆ, ಅವನ ಅಕ್ಷರ ಜ್ಞಾನವನ್ನು ಗುರುತಿಸಿದ್ದ ಅವರ ತಾತ ಮಗನಿಗೆ, ''ಲೇ ಓಬ್ಳಾ ನಮ್ಮ ಪೆಂಚಾಲನಿಗೆ ಸರಸ್ವತಿ ಚನ್ನಾಗಿ ಒಲಿತಾಳೆ ಅಂತ ನನ್ನ ಮನಸ್ಸು ಹೇಳ್ತಾ ಐತೆ. ಯಂಗೂ ಪ್ರೈಮರಿ ಸ್ಕೂಲು ಊರಿನಾಗೆ ಐತೆ. ಮೊದ್ಲು ಸ್ಕೂಲಿಗೆ ಸೇರಿಸಿ ಬಾ. ಪ್ರೈಮರಿ ಸ್ಕೂಲಿನಲ್ಲೆ ಅವನ ಬಂಡವಾಳ ಬಯಲಾಗ್ತೈತೆ. ನಾಲ್ಕನೇ ಕ್ಲಾಸ್ ತಟಾಯಿಸಿದ್ರೆ ಮಿಡ್ಲಿಸ್ಕೂಲ್ಗೆ ಹೋಗ್ಲಿ. ಇಲ್ಲದಿದ್ರೆ ಕುರಿಗಾದ್ರೂ ಹಾಕು, ಹಂದಿಗಾದ್ರೂ ಹಾಕು.'' ಎಂದು ಗೊಗ್ಗರು ಧ್ವನಿಯಲ್ಲಿ ಒತ್ತಾಯಿಸಿದ್ದ. ಅಪ್ಪನ ಒತ್ತಾಯಕ್ಕೆ ಮಣಿದು ಓಬುಳ್ನಾಯ್ಕನು ಮಗ ಪೆಂಚಾಲಯ್ಯನನ್ನು ಸ್ಕೂಲಿನ ಹತ್ತಿರ ಕರೆದುಕೊಂಡು ಹೋಗಿ ಗುರುಲಿಂಗಪ್ಪ ಮೇಷ್ಟ್ರು ಮುಂದೆ ನಿಲ್ಲಿಸಿದ್ದ. ಗುರುಲಿಂಗಪ್ಪ ಮೇಷ್ಟ್ರು ಯಾವುದೋ ಜ್ಞಾನದಲ್ಲಿ ಅಡ್ಮಿಷನ್ ರಿಜಿಸ್ಟರಿನಲ್ಲಿ ಹೆಸರಿನ ಮುಂದೆ ಡೇಟ್ ಆಫ್ ಬರ್ತ್ ಬರೆಯುವಾಗ ಫೆಬ್ರುವರಿ ಇಪ್ಪತ್ತೆಂಟು ಬರೆಯುವ ಬದಲು ಫೆಬ್ರುವರಿ ಮೂವತ್ತು ಎಂದು ಬರೆದು ಮರೆತು ಬಿಟ್ಟಿದ್ದರು. ನಾಲ್ಕನೇ ಕ್ಲಾಸ್ ಪಾಸಾಗಿ ಮಿಡ್ಲಿಸ್ಕೂಲ್ ಸೇರಲು ಟಿ.ಸಿ ಕೊಡುವಾಗಲೂ ಸೇಮ್ ಡೇಟ್ ಆಫ್ ಬರ್ತ್ ಬರೆದು ಕಳಿಸಿದ್ದರು. ಮಿಡ್ಲಿಸ್ಕೂಲಿನ ಮೇಷ್ಟ್ರುಗಳು ಈ ಮಿಸ್ಟೇಕನ್ನು ನೋಡಿಕೊಂಡಿರಲಿಲ್ಲ. ಅದು ಹಾಗೆಯೇ ಮಿಡ್ಲಿಸ್ಕೂಲಿನಿಂದ ಟಿ.ಸಿ ಮೂಲಕ ಹೈಸ್ಕೂಲು ಅಡ್ಮಿಷನ್ ರಿಜಿಸ್ಟರ್‌ಗೂ ಸೇರಿಕೊಂಡುಬಿಟ್ಟಿತ್ತು. ಎಸ್ಸೆಸ್ಸೆಲ್ಸಿ ಬೋರ್ಡಿನಲ್ಲಿ ಅಡ್ಮಿಷನ್ ಟಿಕೆಟ್ ಬರೆಯುವ ಕಾರಕೂನನಿಗೆ ಕಣ್ಣಿಗೆ ಬಿದ್ದರೂ, ಈ ಕೊನೆ ಟೈಮಿನಲ್ಲಿ ನನಗೇಕೆ ಉಸಾಬರಿ ಎಂದು ಸ್ಕೂಲಿನಿಂದ ಡಾಕ್ಯುಮೆಂಟಿನಲ್ಲಿ ಏನು ವಿವರಗಳು ಬಂದಿದ್ದವೋ ಅವನ್ನೇ ಒಂದಿಷ್ಟೂ ವ್ಯಾಕರಣ ತಪ್ಪಿಲ್ಲದೆ ದಾಖಲಿಸಿ ಕಳುಹಿಸಿದ್ದ. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಎರಡನೇ ದರ್ಜೆಯಲ್ಲಿ ಪಾಸು ಮಾಡಿದ್ದ ಪೆಂಚಾಲಯ್ಯನ ಪ್ರತಿಭೆಗೆ ಮೇಷ್ಟ್ರುಗಳೇ ಅಲ್ಲದೆ ಇಡೀ ಊರಿನ ಜನ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಕೊಂಡಾಡಿದ್ದರು.

ಪೆಂಚಾಲಯ್ಯ ಎಸ್ಸೆಸ್ಸೆಲ್ಸಿಯನ್ನು ಸೆಕೆಂಡ್ ಕ್ಲಾಸಿನಲ್ಲಿ ಪಾಸುಮಾಡಿದ್ದು ಬಲು ವಿಶೇಷವಾಗಿ ಓಬುಳ್ನಾಯ್ಕನ ಮನೆಯಲ್ಲಿ ಸಡಗರ ಸಂಭ್ರಮಗಳನ್ನುಂಟುಮಾಡಿತ್ತು. ಫೇಲಾಗಿದ್ದವರ ಮನೆಗಳಲ್ಲಿನ ಅಪ್ಪಂದಿರು ನೆಮ್ಮದಿಯನ್ನು ಕಳೆದುಕೊಂಡು, ''ಹೋಗಿ ಆ ಓಬುಳ್ನಾಯ್ಕನ ಮಗ ಪೆಂಚಾಲಯ್ಯನ ಕಾಲ್ ಕೆಳ್ಗೆ ತೂರಿ, ಬುದ್ಧಿ ಬರ್ತದೆ. ಅವ್ನು ಹುಲ್ ತಂದಾಕಿ, ಕುರಿ ಮೇಯಿಸ್ಕಂಡು ಎಸ್ಸೆಸ್ಸೆಲ್ಸಿ ಪಾಸ್ ಮಾಡಿದಾನೆ ಅಂದ್ರೆ ಮುಂದೆ ಇನ್ನೆಂಥ ಘನಂದಾರಿ ಓದು ಓದ್ತೋದು. ಅವ್ನು ದಫೇದಾರ್ನೋ, ಸರ್ವೆಯರ್ರೊ ಆಗಿ ಬಂದ್ರೆ ಅವ್ನ್ ಮುಂದೆ ಕೈ ಕಟ್ಕೊಂಡು ನಿಂತ್ಕಂಬಿವ್ರಂತೆ.'' ಎಂದು ಯರ್ರಾಬಿರ್ರಿ ಮೈ ಪರಚಿಕೊಂಡಿದ್ದರು. ಸ್ವತಃ ಪೆಂಚಾಲಯ್ಯನ ತಾತನೇ, ''ನೋಡೋ ಓಬ್ಳಾ, ನಾನೇಳಿದ್ದು